# ಮೀನು ಹಿಡಿಯಿರಿ



ಏಷ್ಯಾದ ಒಂದು ದೇಶದಲ್ಲಿ ಕೆಲವು ವರ್ಷಗಳ ಹಿಂದೆ ನಾನು ಹೋಗಿದ್ದಾಗ ನನ್ನ ಕೆಲವು ಗೆಳೆಯರೊಟ್ಟಿಗೆ ಬಂದರಿನ ಬಳಿ ತಿರುಗಾಡುತ್ತಿದ್ದೆನು. ಹಾಗೆ ಹಡಗು ಕಟ್ಟೆಯಿಂದ ನೋಡುವಾಗ ಒಬ್ಬೊಂಟಿಗಳಾದ ಹೆಂಗಸು ಒಂದು ಕಂಬವನ್ನೊರಗಿ ಮೀನು ಹಿಡಿಯುತ್ತಿದ್ದಳು. ಅವಳ ಗಾಳವು ಆಳವಾದ ನೀರಿನೊಳಗೆ ಮುಳುಗಿತ್ತು. ಅವಳು ಕಠಿಣವಾದ ಮುಖಭಾವವನ್ನು ಹೊಂದಿದ್ದಳು. ಅವಳ ಹಿಂದಿದ್ದ ಒಂದು ಪ್ಲಾಸ್ಟಿಕ್ ಪಾತ್ರೆಯಲ್ಲಿ ಕೆಲವು ಚಿಕ್ಕ ಮೀನುಗಳು ಈಜಾಡುತ್ತಿದ್ದವು. ಎಷ್ಟು ಹೊತ್ತಿನಿಂದ ನೀನು ಮೀನು ಹಿಡಿಯುತ್ತಿದ್ದೀ ಎಂದು ನಾವು ಕೇಳಿದಾಗ, ದಿನವೆಲ್ಲಾ ಎಂದು ಉತ್ತರಿಸಿ, ಕೂಡಲೇ ನಾನು ನನ್ನ ಕುಟುಂಬದ ಊಟಕ್ಕೆ ಮತ್ತು ಮಾರಾಟ ಮಾಡಲಿಕ್ಕೆ ಹೀಗೆ ಹಿಡಿಯುತ್ತೇನೆಂದಳು. ಅವಳ ತಾಳ್ಮೆ ಮತ್ತು ಛಲದ ಸಮರ್ಪಣೆ ಮಾಡಿಕೊಂಡ ಯಾವ ಜಯಮಾಲೆಯೂ ಸಿಗದಂತ ಆ ಉರಿಬಿಸಿಲಿನಲ್ಲಿ ಅವಳು ಮಾಡುವ ಕೆಲಸ ನೋಡಿ "ನಾನು ಈ ರೀತಿಯ ಸಮರ್ಪಿಸಿಕೊಂಡ ಕೆಲಸ ಮಾಡುತ್ತೇನೋ" ಎಂದು ಅಂತರ್ಯವನ್ನು ಪರೀಕ್ಷಿಸಿಕೊಳ್ಳುವಂತಾಯಿತು. ಆದರೆ ಈ ಕಠಿಣವಾದ ಕೆಲಸ ಬಹು ಅಲ್ಪವಾದದ್ದೆಂದುಕೊಂಡು ಸಮುದ್ರದ ಕಡೆ ನೋಡುವಾಗ ಸಾವಿರಾರು ಮೀನುಗಳು ಅತ್ತಿತ್ತ ಈಜುವುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ನಾನು ಅಂದುಕೊಂಡಂತೆ ಆ ಹೆಂಗಸಿನ ಸಮರ್ಪಣಾ ಕಾರ್ಯ ಅವಳ ಬುದ್ಧಿಹೀನ ಕಾರ್ಯವೆನಿಸಿತು. ಅವಳು ತನ್ನ ಸ್ನೇಹಿತರನ್ನು ಕರೆದು ದೊಡ್ಡ ಬಲೆಯನ್ನು ಆಳಕ್ಕೆ ಎಸೆದು ಹಿಡಿದಿದ್ದರೆ ಸಾವಿರಪಟ್ಟು ಸಿಕ್ಕುತ್ತಿತ್ತಲ್ಲಾ ಎಂದುಕೊಂಡೆ. "ಜೋಡನಾ ಕಾರ್ಯ (Network)"ದಿಂದ ಹೆಚ್ಚು ಫಲಕಾಣಬಹುದಲ್ಲವೇ?

ಸಂಗ್ರಹ : ಸುನಯನ ವಾಲ್ಟರ್ಸ್, ಉಡುಪಿ